ಬಂದಿರುತ್ತಾರೆ. ಪಾರ್ಕ್ ಸ್ಥಾಪನೆಗೆ 19 ಎಕರೆ 37 ಗುಂಟೆ ಜಮೀನನ್ನು ಗುರುತಿಸಿದೆ. ಕೆ.ಐ.ಎ.ಡಿ.ಬಿ. ವತಿಯಿಂದ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಎಸ್.ಐ.ಟಿ.ಪಿ. ಯೋಜನೆಯಡಿ ಸೌಲಭ್ಯ ಪಡೆಯಲು ಎಸ್.ಪಿ.ವಿ. ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಹೈಟೆಕ್ ಲೂಮ್ಸ್ ಹಾಗೂ ಜವಳಿ ಸಂಬಂಧ ಕೈಗಾರಿಕೆಗಳಿಗೆ ಜಮೀನು ಹಾಗೂ ಮೂಲಭೂತ ಸೌಲಭ್ಯಗಳನ್ನು ಸದರಿ ಜವಳಿ ಪಾರ್ಕ್‌ನಲ್ಲಿ ನೀಡಲಾಗುವುದು.

1363 ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರ ಹೊಸದಾಗಿ ತಾಲ್ಲೂಕುಗಳನ್ನು ರಚನೆ ಮಾಡಿದೆಯೇ;

ಆ) ಹಾಗಿದ್ದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ಕೈಗೊಂಡ ಕ್ರಮವೇನು;

ಇ) ರಾಜ್ಯದಲ್ಲಿ ಯಾವ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು;

ಈ) ಯಾವ ಕಾಲಮಿತಿಯೊಳಗೆ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 1956 ರಲ್ಲಿ ಹೊಸ ಮೈಸೂರು ರಾಜ್ಯ ನಿರ್ಮಾಣವಾದ ನಂತರ ಸಣ್ಣಪುಟ್ಟ ಬದಲಾವಣೆಗಳನ್ನು ಮಾತ್ರ ತಾಲ್ಲೂಕು ಮಟ್ಟದಲ್ಲಿ ಮಾಡಲಾಗಿದೆ. ಆದರೆ, ಜಿಲ್ಲೆಗಳ ಪುನರ್ ವಿಂಗಡಣೆಯನ್ನು ಮೂರು ಸಲ ಮಾಡಲಾಗಿದೆ. 1950 ರ ದಶಕದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳು (Community Development Programs) ಜಾರಿಯಲ್ಲಿದ್ದಾಗಲೂ ಕೂಡ ಬೇರೆ ರಾಜ್ಯಗಳಲ್ಲಿ ತಾಲ್ಲೂಕುಗಳನ್ನು ವಿಭಜಿಸಿ ಅಭಿವೃದ್ಧಿ ಮಂಡಳಿಗಳನ್ನಾಗಿ (Development Block) ಮಾಡಲಾಗಿತ್ತು. ಆದರೆ ಕರ್ನಾಟಕದಲ್ಲಿ ತಾಲ್ಲೂಕುಗಳನ್ನೇ Blockಗಳೆಂದು ಪರಿಗಣಿಸಲಾಯಿತು. ಆಗಲೂ ಕೂಡ ತಾಲ್ಲೂಕುಗಳು ಪುನರ್‌ರಚನೆ ಆಗಲಿಲ್ಲ. ಶ್ರೀ ವಾಸುದೇವರಾವ್ ಸಮಿತಿಯು ಕೆಲವು ಸೂಚನೆಗಳನ್ನು ಮಾಡಿದ್ದರೂ ಕೂಡ ತಾಲ್ಲೂಕುಗಳ ಪುನರ್ ರಚನೆ ಕಾರ್ಯ ಕೈಗೊಳ್ಳಲಿಲ್ಲ. ನಂತರ ಜಿಲ್ಲಾ ರಚನೆಗೆ ಸಂಬಂಧಿಸಿದಂತೆ ಹುಂಡೇಕರ

ಹಾಗೂ ಗದ್ದಿಗೌಡರ್ ಸಮಿತಿಗಳು ಕೆಲವು ತಾಲ್ಲೂಕುಗಳ ರಚನೆಯ ಬಗ್ಗೆ ಮಾಡಿದ ಸೂಚನೆಗಳು ಕೂಡ ಜಾರಿಗೆ ಬರಲಿಲ್ಲ. ಆದರೆ ಇತ್ತೀಚೆಗೆ 2001 ರಲ್ಲಿ ಬೆಂಗಳೂರು ಪೂರ್ವ ತಾಲ್ಲೂಕನ್ನು ಮಾತ್ರ ರಚಿಸಲಾಗಿದೆ.

ಆ) ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಪರಿಶೀಲಿಸಿ ನಿರ್ಧರಿಸಲಾಗುವುದು.

ಈ) ಮೇಲೆ (ಇ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

1431 ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ವಿಸ್ತಾರಗೊಂಡ ಕಾಪು ವಿಧಾನ ಸಭಾ ಕ್ಷೇತ್ರದ ಜನಸಂಖ್ಯೆಯನ್ನು ಕಂದಾಯ ಗ್ರಾಮವಾರು ಜಾತಿವಾರು ಪಟ್ಟಿಯನ್ನು ನೀಡಲಾಗುವುದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಜಾತಿವಾರು ಪಟ್ಟಿಯನ್ನು ಮಾಡಲಾಗುವುದಿಲ್ಲ. ವಯಸ್ಕರ ಮತದಾರರ ಪಟ್ಟಿಯನ್ನು ಮಾಡಲಾಗುವುದು.

ಕರ್ನಾಟಕ ವಿಧಾನ ಸಭೆ

1044 ಶ್ರೀ ಗೋಪಾಲ ಪೂಜಾರಿ.ಕೆ. :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ 10 ವರ್ಷ ಸೇವೆ ಸಲ್ಲಿಸಿದ್ದ 'ಡಿ' ಮತ್ತು 'ಸಿ' ದರ್ಜೆಯ ನೌಕರರನ್ನು ಖಾಯಂಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;